# ಹರಿಶ್ಚಂದ್ರಚಾರಿತ್ರದ ಹೊಲತಿಯರ ಪ್ರಸಂಗ: ದಲಿತ ಪ್ರಜ್ಞೆಯ ಟಿಪ್ಪಣಿ

**ರಾಘವೇಂದ್ರ ಕುಪ್ಪೇಲೂರ**

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಸೌಂದರ್ಯ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಆಂಡ್ ಸೈನ್ಸ್, ಬೆಂಗಳೂರು.

DOI: https://doi.org/10.5281/zenodo.15343806

## ABSTRACT:

ಈ ಲೇಖನದಲ್ಲಿನ 'ದಲಿತ ಪ್ರಜ್ಞೆ' ಎಂಬುದನ್ನು ಆಧುನಿಕ ದಲಿತ ಲೋಕಮೀಮಾಂಸೆಯ ಅರಿವಿನ ಹಿನ್ನೆಲೆಯಲ್ಲಿ ಪ್ರಯೋಗಿಸಲಾಗಿದೆ. ಅರವಿಂದ ಮಾಲಗತ್ತಿ ಅವರು 'ದಲಿತ ಪ್ರಜ್ಞೆ'ಯನ್ನು ಕುರಿತು ಹೀಗೆ ಹೇಳುತ್ತಾರೆ: 'ಪ್ರಜ್ಞೆ ಎಂಬ ಪದ – ಭೂತ – ವರ್ತಮಾನ – ಭವಿಷತ್ಕಾಲಗಳನ್ನು ಒಳಗೊಂಡು ಅವುಗಳನ್ನು ಒಂದು ಸರಣಿಯಲ್ಲಿರಿಸಿ ಪರಿಸರದ ಸ್ಥಿತಿಯನ್ನು ಗ್ರಹಿಸಿ ಆ ಸ್ಥಿತಿಗೆ ಚಾಲನೆ ನೀಡುವ ಶಕ್ತಿ' ಎನ್ನುತ್ತಾರೆ. ಪ್ರಸ್ತುತ ಈ ಲೇಖನದ ವ್ಯಾಪ್ತಿಯು ಅಧ್ಯಯನದ ದೃಷ್ಟಿಯಿಂದ ಮಧ್ಯಕಾಲೀನ ಸಂದರ್ಭದ ಕವಿ ರಾಘವಾಂಕನ ಹರಿಶ್ಚಂದ್ರ ಚಾರಿತ್ರ ಕಾವ್ಯದ ಹೊಲತಿಯ ಪ್ರಸಂಗವನ್ನು ಕೇಂದ್ರಿಕರಿಸಿದೆ. ಇಲ್ಲಿ ವಿಶ್ವಾಮಿತ್ರ, ಹೊಲತಿಯರು, ಹರಿಶ್ಚಂದ್ರ ಮತ್ತು ಕವಿಯ ನೆಲೆಯಂದ ಹೀಗೆ ನಾಲ್ಕು ಪಾರ್ಶ್ವಗಳಲ್ಲಿ ದಲಿತ ಪ್ರಜ್ಞೆಯ ಕಣ್ಣೋಟವನ್ನು ಒಳಗೊಂಡಿದೆ.

## KEYWORDS:

ಹರಿಶ್ಚಂದ್ರಚಾರಿತ್ರ, ರಾಘವಾಂಕ, ಹೊಲತಿಯರ ಪ್ರಸಂಗ, ಗಾನರಾಣಿಯರ ಪ್ರಸಂಗ, ದಲಿತ ಪ್ರಜ್ಞೆ.

**ಪ್ರಸ್ತಾವನೆ:**

ಅನುಭವ ಹಾಗೂ ಆಲೋಚನೆಗಳ ಫಲಿತವಾಗಿ ಪ್ರಜ್ಞೆ ರೂಪುಗೊಳ್ಳುತ್ತದೆ. ಈ ಪ್ರಕ್ರಿಯೆ ಮನಶಾಸ್ತ್ರಕ್ಕೆ ಸಂಬಂಧಿಸಿದ್ದಾದರೂ ಇದರ ಅನ್ವಯಿಕ ನೆಲೆಯ ವ್ಯಾಪ್ತಿ ವಿಶಾಲವಾಗಿದೆ. ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯ ಚಹರೆಗಳು ಅಧಿಕೃತವಾಗಿ ದಾಖಲಾದದ್ದು ಹನ್ನೆರಡನೆ ಶತಮಾನದ ವಚನ ಸಾಹಿತ್ಯದಲ್ಲಿ. ಅಂಚಿನ ಸಮುದಾಯಗಳು ಮುನ್ನೆಲೆಗೆ ಹರಿದು ಬಂದು ಲೋಕದ ಸಿದ್ಧಮಾದರಿಯ ರೂಢಿಗಳನ್ನು ಪ್ರಶ್ನಿಸುತ್ತಾ, ಹೊಸ ಪ್ರಜ್ಞೆಗಳನ್ನು ರೂಪಿಸಿದವು. ಆ ಮೂಲಕ ಮುಂದಿನ ಹರಿವಿನ ದಾರಿಯ ಕಣ್ಣೋಟ ಸ್ಪಷ್ಟವಾಯಿತು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕುಲದ ಬಗೆಗಿನ ಚರ್ಚೆಯನ್ನು ಪಂಪ ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ಈ ಹಿಂದೆ ಎತ್ತಿಕೊಂಡಿದ್ದನು. ಕರ್ಣನನ್ನು ಕುರಿತು

ದ್ರೋಣಾಚಾರ್ಯರು 'ನಾಲಗೆ ಕುಲಮಂ ತಬ್ಬುವವೊಲುರದೆ ನೀ ಕೆಡೆ ನುಡಿವೈ' ಎನ್ನುತ್ತಾರೆ. ಆದರೆ ಈ ಮಾತಿಗೆ ಪ್ರತಿಯಾಗಿ ಕುಲ ಯಾವುದು ಎಂಬುದನ್ನು ಕರ್ಣ ಹಿರಿಯರಿಗೆ ಬೋಧಿಸುವಂತಾಗುತ್ತದೆ. ಆ ಮೂಲಕ ಅವರ ಕುಲಮದದ ಗರ್ವಭಂಗವನ್ನು ಮಾಡುತ್ತಾನೆ. ಇಂತಹ ಪ್ರಜ್ಞೆಯ ಚರ್ಚೆ ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿ ಪ್ರಾಸಂಗಿಕವಾಗಿ, ರಾಘವಾಂಕನ 'ಹರಿಶ್ಚಂದ್ರ ಚಾರಿತ್ರ'ದಲ್ಲಿ ಕಾಣಸಿಗುತ್ತದೆ. ಹೊಲತಿಯರು ಹಾಗೂ ಹರಿಶ್ಚಂದ್ರ, ವೀರಬಾಹು ಹಾಗೂ ಹರಿಶ್ವಂದ್ರನ ಮುಖಾಮುಖಿಯಲ್ಲಿ ಇಂತಹ ವಿಚಾರಗಳನ್ನು ಗುರುತಿಸಬಹುದು. ಟಿ ಎಸ್ ಎಲಿಯಟ್ ತನ್ನ 'Tradition and Individual Talent' ನಲ್ಲಿ ಪರಂಪರೆಯ ಪ್ರಜ್ಞೆಯ ಬಗ್ಗೆ ಹೇಳುತ್ತಾನೆ. ಕವಿಯೊಬ್ಬನ ಹಿಂದೆ ಇದ್ದ ಪರಪಂಪರೆಯ ಪ್ರಜ್ಞೆ ತನ್ನ ಬರೆಹಕ್ಕೆ ಉಂಟುಮಾಡಬಲ್ಲ ಪರಿಣಾಮ ಮತ್ತು ಅದರ ಅಗತ್ಯತೆ ಕುರಿತು ಎಲಿಯಟ್ ಪ್ರಸ್ತಾಪಿಸುತ್ತಾನೆ. ರಾಘವಾಂಕನ ಈ ಕಾವ್ಯವೂ ಅಂತಹ ಪರಂಪರೆಯ ಪ್ರಜ್ಞೆಯನ್ನು ತನ್ನೊಳಗೆ ಆವಿರ್ಭವಿಸಿಕೊಂಡು ಅಭಿವ್ಯಕ್ತವಾಗಿದೆ. ಅಲ್ಲದೆ ಕನ್ನಡದಲ್ಲಿ ವಚನ ಸಾಹಿತ್ಯದ ನಂತರ ಕುಲದ ಬಗೆಗಿನ ಸ್ಥಾಪಿತ ನಂಬಿಕೆ, ಶ್ರೇಷ್ಟತೆಯ ವ್ಯಸನಕ್ಕೆ ಎದುರಾಗಿ ನಿಂತು, ಗಟ್ಟಿಯಾದ ಧ್ವನಿಯಲ್ಲಿ ಪ್ರತಿರೋಧಿಸಿದ ಪ್ರಯತ್ನವನ್ನು ರಾಘವಾಂಕನ ಹರಿಶ್ಚಂದ್ರ ಚಾರಿತ್ರದಲ್ಲಿ ಗುರುತಿಸಬಹುದು.

ಇಂದ್ರನ ಸಭೆಯಲ್ಲಿ 'ಮನವಚನಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ' ಎಂಬ ಪ್ರಶ್ನೆಗೆ ಹರಿಶ್ಚಂದ್ರ ಎಂಬ ಉತ್ತರ ವಸಿಷ್ಠರಿಂದ ದೊರಕುತ್ತದೆ. ಈ ತುಂಬಿದ ಒಡ್ಡೋಲಗದಲ್ಲಿ ತನ್ನನ್ನು ಮೊದಲು ಉಪಚರಿಸಿ, ಆದರಿಸಲಿಲ್ಲ ಎಂಬ ಏಕಮಾತ್ರ ಕಾರಣದಿಂದ ವಿಶ್ವಾಮಿತ್ರ ಅಸೂಯೆಗೊಂಡು ಕುಪಿತಗೊಳ್ಳುತ್ತಾನೆ. ಅಲ್ಲದೆ ಹಾಗೆ ಕಾಯಾ–ವಾಚಾ–ಮನಸಾ ತ್ರಿಕರಣ ಶುದ್ಧಿಗಳಿಂದ ಇರಲು ಸಾಧ್ಯವಿಲ್ಲ ಎಂಬ ಪ್ರತಿವಾದ ಹೂಡುತ್ತಾನೆ. ಇಲ್ಲಿ ವಸಿಷ್ಠ ಮುನಿ ಹೇಳಿದ್ದನ್ನು ನಿರಾಕರಿಸಲೇಬೇಕೆಂಬ ಕಾರಣದಿಂದ ಪ್ರತಿವಾದ ಹೂಡುವ ವಿಶ್ವಾಮಿತ್ರ, ತಾತ್ವಿಕ ಭಿನ್ನಾಭಿಪ್ರಾಯವನ್ನು ಬದಿಗೊತ್ತಿ, ಬದಲಾಗಿ ವೈಯಕ್ತಿಕವಾಗಿ ಎದುರಿಸುತ್ತಾನೆ. ಸಮಸ್ತ ಜೀವರಾಶಿಯಲ್ಲಿ ಒಳಿತನ್ನು ಕಾಣುವ ಬದಲಾಗಿ ದೋಷವನ್ನೆ ಎತ್ತಿ ಆಡುವ ಮನೋಧರ್ಮ ಮುಪ್ಪುರಿಗೊಂಡು ವಿಶ್ವಾಮಿತ್ರ ಕುಪಿತಗೊಳ್ಳುತ್ತಾನೆ ಎಂಬುದನ್ನು ಕವಿ ಹೀಗೆ ಹೇಳುತ್ತಾನೆ: 'ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ ಭಾವ ಮುಪ್ಪುರಿಗೊಂಡು ಕುಡಿವರಿದು ಕಡುಕೋಪವಾವರಿಸಿ ಕೌಶಿಕಂ. . ' ಎಂದು ಹೇಳುತ್ತಾನೆ. ಸರ್ವಜ್ಞಾನಶ್ರೇಷ್ಠರೆಂದೆನಿಸಿಕೊಂಡ ವಿಶ್ವಾಮಿತ್ರ ಇಂತಹ ಕ್ಷುಲ್ಲಕ ವರ್ತನೆ ಹಾಗೂ ಜ್ಞಾನಮದ, ಶ್ರೇಷ್ಠತೆಯ ವ್ಯಸನದಿಂದ ಅಲ್ಲಲ್ಲಿ ಸಣ್ಣತನವನ್ನು ತೋರುತ್ತಾರೆ. ಇಂತಹ ವರ್ತನೆಗಳಿರುವ ಕಾರಣದಿಂದಾಗಿ ಕವಿ ತನ್ನ ಕಾವ್ಯದಲ್ಲಿ ಹೊಲೆತನವನ್ನು ಇನ್ನೊಂದು ಬಗೆಯಲ್ಲಿ ವ್ಯಾಖ್ಯಾನಿಸುತ್ತಾನೆ. 'ಅತಿ ಹುಸಿವ ಯತಿ ಹೊಲೆಯ',

‘ಹುಸಿದು ಮಾಡುವ ಯಜ್ಞ ಶತವೆಯ್ದೆ ಪಂಚಪಾತಕ’ ಎಂಬುದಾಗಿ, ಉತ್ತಮರು ಎಂದು ಎನಿಸಿಕೊಂಡವರಲ್ಲಿನ ಅಧಮತನವನ್ನು ಗುರುತಿಸಿ ಶ್ರೇಷ್ಠತೆಯ ವ್ಯಸನದಿಂದ ವಿಮುಖಗೊಳಿಸಿ ಗುಣಧರ್ಮವನ್ನು ಪ್ರತಿಪಾದಿಸುತ್ತಾನೆ.

ಇಂದ್ರನ ಸಭೆಯಲ್ಲಿ ಒಂದು ಮಾದರಿಯ ಜೂಜಿನಿಂದಲೆ ಆರಂಭವಾಗುವ ಈ ಪಂದ್ಯ ಸತ್ಯ ಅಸತ್ಯಗಳ ನಡುವೆ ಸೆಣಸುವ ಕಾಳಗದಂತೆ ಕಂಡರೂ, ವಿಶ್ವಾಮಿತ್ರನ ಆಯಾಮದಲ್ಲಿ ಸತ್ಯವನ್ನು ಸೋಲಿಸಲೇಬೇಕೆಂಬ ಅಹಂಕಾರದ ಪ್ರತಿಷ್ಠೆಯಾಗಿ ತೋರುತ್ತದೆ. ಹರಿಶ್ಚಂದ್ರನಿಂದ ಕೇವಲ ಹುಸಿಯನ್ನಾಡಿಸುವ ಸಲುವಾಗಿ ತಾನು ಇಳಿಯುವ ಅಧಮತನಕ್ಕೆ ಕೊನೆಯಿಲ್ಲವೆಂಬಂತೆ ವಿಶ್ವಾಮಿತ್ರ ಸಣ್ಣವನಾಗುತ್ತಾನೆ. ಆರಂಭದಲ್ಲಿ ಹರಿಶ್ಚಂದ್ರನ ರಾಜ್ಯದಲ್ಲಿ ಕ್ರೂರ ಮೃಗಗಳನ್ನು ತನ್ನ ತಪಸ್ ಶಕ್ತಿಯಿಂದ ಸೃಷ್ಟಿಸಿ ರಾಜ್ಯವಿನಾಶಕ್ಕೆ ಮುಂದಾಗುತ್ತಾನೆ. ಅದನ್ನು ಮೆಟ್ಟಿನಿಂತ ಹರಿಶ್ಚಂದ್ರನ ನಡೆಯಿಂದ ಮತ್ತೆ ಕುಪಿತಗೊಂಡು ಹೊಲತಿಯರನ್ನು ಸೃಷ್ಟಿಸುತ್ತಾನೆ. ತನ್ನ ಸ್ವಾರ್ಥ ಕಾರ್ಯ ಸಾಧನೆಗಾಗಿ ಏನನ್ನು ಬೇಕಾದರೂ ಸೃಷ್ಟಿಸಬಲ್ಲ ವಿಶ್ವಾಮಿತ್ರನ ಈ ವರ್ತನೆ ಪರೀಕ್ಷಕ ಗುಣದ ಬದಲಾಗಿ ಕೇಡಿನ ಸ್ವರೂಪವಾಗಿ ಕಂಡುಬಂದಿದೆ. ಕವಿ ಹೇಳುವಂತೆ: ಅತಿಕೋಪ, ಬದ್ಧದ್ವೇಷ, ಅನಿಮಿತ್ತವೈರ ಎಂಬ ಯಾವ ಗುಣಗಳು ಮುನಿಯನ್ನು ಹೊಲೆಯನ್ನಾಗಿ ಮಾಡಬಲ್ಲವೊ ಅದರಿಂದ ಹುಟ್ಟಿವರೆ ಹೊಲತಿಯರು ಎಂದೆನ್ನುತ್ತಾನೆ. ಹೀಗೆ ಹೇಳುವಾಗ ಹೊಲೆತನಗಳು ಗುಣಧರ್ಮವಾಗಿ ವ್ಯಾಖ್ಯಾನಿಸಲ್ಪಟ್ಟಿವೆ. ಆದರೆ ತನ್ನ ಹೊಲೆತನಗಳನ್ನೆ ಬಳಸಿಕೊಂಡು ಹೊಲತಿಯರನ್ನು ಸೃಷ್ಟಿಸುವ ವಿಶ್ವಾಮಿತ್ರ ಕಡೆಗೂ ಅವರಿಂದ ಮಾಡಿಸಿಕೊಳ್ಳುವುದು ಸ್ವಾರ್ಥ ಸಾಧನೆನಯ ಕೆಲಸವೇ ಆಗಿದೆ. ಅಂದರೆ ಹೊಲೆಯರನ್ನು ಇಲ್ಲಿ ಔಪಯೋಗಿಕ ನೆಲೆಯಿಂದ ಬಳಸಿಕೊಳ್ಳುವ ಕ್ರಮವಿದೆ. ಕಾರ್ಯ ಸಾಧನೆಯ ಬಳಿಕ ಅವರನ್ನು ಇಲ್ಲವಾಗಿಸಿಬಿಡುವ ಅವರ ಅಸ್ತಿತ್ವವನ್ನು ನಾಶಗೊಳಿಸುವ ರೀತಿ, ಉತ್ತಮರೆನಿಸಿಕೊಂಡವರು ಕೆಳವರ್ಗಗಳನ್ನು ನಡೆಸಿಕೊಳ್ಳುವ ಕ್ರಮವನ್ನೆ ವಿಶ್ವಾಮಿತ್ರನಲ್ಲಿ ಕಾಣಬಹುದುದಾಗಿದೆ.

ಹರಿಶ್ಚಂದ್ರನೆಂಬ ಸತ್ಯದ ಪ್ರತಿಮೆಯನ್ನು ಒಡೆದು ಹಾಕಲು, ಅಸತ್ಯವನ್ನಾಡಿಸಲು ಹೊಲತಿಯರನ್ನು ಸೃಷ್ಟಿಸುವ ಇಲ್ಲಿನ ಕಾರ್ಯಾಕಾರಣವು ಕೆಡುಕಿನ ಭಾಗವಾಗಿದೆ. ಅಂದರೆ ಒಳಿತಿಗೆ ಕಡೆಕು ಎಂಬ ಪರ್ಯಾಯಕ್ಕೆ ಹೊಲತಿಯರನ್ನು ಸೃಷ್ಟಿಸಲಾಗಿದೆ. ಧರ್ಮವನ್ನು ಪಾಲಿಸಬೇಕು ಎನ್ನುವ ವಿಶ್ವಾಮಿತ್ರ, ತಾನು ಪಂದ್ಯದಲ್ಲಿ ಗೆಲ್ಲುವ ಸಲುವಾಗಿ ಹರಿಶ್ಚಂದ್ರನನ್ನು ಅಧರ್ಮಿಯನ್ನಾಗಿ ಮಾಡಲು ಮುಂದಾಗುತ್ತಾನೆ. ಈ ನಡೆ ದ್ವಂದ್ವಾತ್ಮಕವಾಗಿದ್ದು ಕೇವಲ ತನ್ನ ಕಾರ್ಯಸಾಧನೆಗಾಗಿ ಏನನ್ನು ಬೇಕಾದರೂ ಮಾಡಲು ಸಿದ್ಧವಿರುವ ಸಣ್ಣತನವನ್ನು ತೋರಿಸುತ್ತದೆ. ‘ವಿಪ್ರರು ನುಡಿದಂತೆ ನಡೆಯರು ತಮಗೊಂದು ಬಟ್ಟೆ ಶಾಸ್ತ್ರಕೊಂದು ಬಟ್ಟೆ’ ಹಾಗೂ ‘ನಡೆ ನುಡಿ ಒಂದಾಗಬೇಕು’ ಎನ್ನುವ ವಚನಧರ್ಮದ ಸಾರ ಇಲ್ಲಿ ವಿಶ್ವಾಮಿತ್ರ ಹಾಗೂ

ಹರಿಶ್ಚಂದ್ರನ ಮೂಲಕ ಮುಖಾಮುಖಿಯಾದಂತಿದೆ.

1965 ರಲ್ಲಿ ಹುಣಸೂರು ಕೃಷ್ಣಮೂರ್ತಿ ಅವರ ನಿರ್ದೇಶನದಲ್ಲಿ ಸತ್ಯ ಹರಿಶ್ಚಂದ್ರ ಸಿನಿಮಾ ತೆರೆ ಕಂಡಿತು. ಈ ಸಿನಿಮಾದಲ್ಲಿ ಹೊಲತಿಯರನ್ನು ಸೃಷ್ಟಿಸುವ ಪ್ರಸಂಗ ಕಾವ್ಯಸೃಷ್ಟಿಗಿಂತ ದೂರಹೋಗಿ ವಿಕೃತವಾಗಿದೆ. ಸಿನಿಮಾದಲ್ಲಿ ವಿಶ್ವಾಮಿತ್ರ ಕ್ರೂರಮೃಗಗಳನ್ನು ಸೃಷ್ಟಿಸುವಾಗ ತನ್ನ ಕಮಂಡಲದ ನೀರನ್ನು ಪ್ರೋಕ್ಷಣೆ ಮಾಡಿ ಮೃಗಗಳನ್ನು ಸೃಷ್ಟಿಸುತ್ತಾನೆ. ಆದರೆ ಮುಂದೆ ಹೊಲತಿಯರನ್ನು ಸೃಷ್ಟಿಸುವಾಗ ಮಾತ್ರ ತನ್ನ ಪಾದವನ್ನು ನೆಲಕ್ಕೆ ಒದೆಯುವುದರ ಮೂಲಕ ಹೊಲತಿಯರನ್ನು ಸೃಷ್ಟಿಸುತ್ತಾನೆ. ಕ್ರೂರಮೃಗಗಳನ್ನು ಸೃಷ್ಟಿಸುವಾಗ ಜಲ ಪ್ರೋಕ್ಷಣೆಯಿಂದಲೂ, ಹೊಲತಿಯರನ್ನು ಸೃಷ್ಟಿಸುವಾಗ ಪಾದದಿಂದಲೂ ಸೃಷ್ಟಿಸುವ ಈ ಕ್ರಮ, ಹೊಲೆತನವನ್ನು ಕೀಳುಮಟ್ಟದ ಅಭಿರುಚಿಯಲ್ಲಿ ತೋರಿಸಲಾಗಿದೆ. ಅಲ್ಲದೆ ವರ್ಣಾಶ್ರಮದ ರೂಢಿಗಳನ್ನು ಪ್ರತಿಪಾದಿಸುವಂತಹ ಮನೋಧರ್ಮವನ್ನು ಒಳಗೊಂಡಿದೆ. ಹದಿಮೂರನೇ ಶತಮಾನದ ಕಾವ್ಯದಲ್ಲಿನ ಸೂಕ್ಷ್ಮಪ್ರಜ್ಞೆ, ಇಪ್ಪತ್ತನೆ ಶತಮಾನದ ಸಿನಿಮಾದಲ್ಲಿ ಇಲ್ಲದಿರುವುದು ಸೋಜಿಗವೆನಿಸುತ್ತದೆ.

ಹರಿಶ್ಚಂದ್ರಚಾರಿತ್ರ ಕಾವ್ಯದ ಹೃದಯ ಭಾಗದಂತಿರುವ ಪ್ರಸಂಗವೆಂದರೆ ಹೊಲತಿಯರ ಪ್ರಸಂಗ. ಇಲ್ಲಿ ಪ್ರತಿಪಾದಿತವಾಗುವ ಸಂಭಾಷಣೆ ಹಾಗೂ ಮೌಲ್ಯಗಳು ಸರ್ವಕಾಲಕ್ಕೂ ಪ್ರಸ್ತುತವೆನಿಸುತ್ತವೆ. ವಿಶ್ವಾಮಿತ್ರನ ಕಾರ್ಯಸಾಧನೆಯ ಫಲವಾಗಿ ಹುಟ್ಟಿಸಲ್ಪಡುವ ಈ ಹೊಲತಿಯರು ಈ ಕಾವ್ಯದಲ್ಲಿ ಚಾಂಡಾಲ ಕನ್ನಿಕೆಯರು, ಗಾನರಾಣಿಯರು ಎಂಬ ಹೆಸರಿನಿಂದಲೂ ಗುರುತಿಸಿಕೊಳ್ಳುತ್ತಾರೆ. "ನೀವು ಸರ್ವಬುದ್ಧಿಗಳೋಳಾತನ ಮರುಳುಮಾಡುತಿರಿ ಹೋಗಿಯೆಂದಟ್ಟಿದಂ ದುರ್ಮಂತ್ರಬಲವಂತನು" ಎಂಬುದಾಗಿ ವಿಶ್ವಾಮಿತ್ರ ಹೇಳುತ್ತಾನೆ. ಇಲ್ಲಿನ ಹೊಲತಿಯರು ತಮಗೆ ವಹಿಸಿದ ಕಾರ್ಯವನ್ನಷ್ಟೆ ಕಾಯಕನಿಷ್ಠೆಯಿಂದ ಪಾಲಿಸುವವರಾಗಿದ್ದಾರೆ. ವಿಶ್ವಾಮಿತ್ರ ಸರ್ವಬುದ್ಧಿಯಲ್ಲಿ ಬಳಸಿ ಎಂದು ಹೇಳಿದರೂ ಅವರು ಬಳಸುವುದು ಗಾಯನ ಹಾಗೂ ನೃತ್ಯದಂತಹ ಕಲಾತ್ಮಕ ಸಂಗತಿಗಳನ್ನು ಮಾತ್ರ. ಕಲೆಗಳ ಮೂಲವನ್ನು ಅರಸುತ್ತಾ ಹೋದರೆ ಹೇಗೆ ಜಾನಪದದ ಕುರುಹುಗಳು ಸಿಕ್ಕುತ್ತವೆಯೊ, ಹಾಗೆಯೆ ಸೃಜನಶೀಲತೆ ಎಂಬುದು ನೆಲಮೂಲದ ದೇಸಿಯತೆಯ ಆವರಣದಲ್ಲಿಯೇ ರೂಪುಗೊಳ್ಳುವಂತಹ ಸಂಗತಿಯಾಗಿದೆ. ತಳವರ್ಗಗಳಲ್ಲಿ ಇರುವ ಇಂತಹ ಸೃಜನಾತ್ಮಕ ಕಲೆಯನ್ನು ಅಭಿವ್ಯಕ್ತಿಸುವ ಪ್ರತಿನಿಧಿಗಳಾಗಿ ಹೊಲತಿಯರು ಇಲ್ಲಿ ಕಂಡುಬರುತ್ತಾರೆ.

ತಮ್ಮ ನೃತ್ಯ-ಗಾಯನದಿಂದ ಹರಿಶ್ಚಂದ್ರನ ದಣಿವು, ಆಯಾಸವನ್ನು ನೀಗಿಸಿದ ಬಳಿಕ, ಸತ್ತಿಗೆಯನ್ನು ಕೇಳಿ ನಿರಾಸೆಯುಂಟಾಗಿ ಮುಂದೆ ತಮ್ಮನ್ನು ವರಿಸುವಂತೆ

ಕೇಳಿಕೊಳ್ಳುತ್ತಾರೆ. ಹೊಲತಿಯರ ಈ ಬೇಡಿಕೆಯನ್ನು ನಿರಾಕರಿಸುವ ಬದಲು ಕುಲದ ಮಾತನ್ನು ಮುಂದುಮಾಡಿ ಹೊಲೆತನವನ್ನು ತುಚ್ಛೀಕರಿಸುತ್ತಾನೆ. ಹೊಲತಿಯರು ಹೀಗೆ ಬಂದು ಸತಿಯರಾಗುತ್ತೇವೆ ಎನ್ನುವರಲ್ಲ ಇದು ಕಾಲ ಮಹಿಮೆಯೋ ಅಥವಾ ನೆಲದ ಮಹಿಮೆಯೋ ಎನ್ನುತ್ತಾನೆ. ಕುಲವನ್ನು ಮುಂದು ಮಾಡಿ ತೆಗಳಿದ್ದರಿಂದ ಕೆರಳಿದ ಹೊಲತಿಯರು ಹರಿಶ್ಚಂದ್ರನ್ನು ತಮ್ಮ ಪ್ರತಿವಾದದಿಂದ ಮಣಿಸುತ್ತಾರೆ. ಈ ಪ್ರತಿವಾದವು ಜೀವಪರ, ಮಾನವೀಯ ಮತ್ತು ನೈಸರ್ಗಿಕ ಸತ್ಯಗಳಿಂದ ಕೂಡಿದ್ದು ಎಲ್ಲ ಕಾಲಕ್ಕೂ ಪ್ರಸ್ತುತವೆನಿಸುವ ಸಂಗತಿಗಳಾಗಿವೆ. ಒಳ್ಳೆಯ ಗುಣಗಳಿರುವಾಗ ಕೊರತೆಯನ್ನೇ ಮುಂದುಮಾಡಬಾರದು. ತಮ್ಮಲ್ಲಿ ರೂಪು ಯೌವನಗಳಿರುವಾಗ ಕುಲದ ಮಾತು ಏಕೆ? ಎಂದು ಆರಂಭದಲ್ಲಿ ಪ್ರಶ್ನಿಸುತ್ತಾರೆ. ಇನ್ನು ಹರಿಶ್ಚಂದ್ರನಿಗೆ ಹೊಲತಿಯರು ರಾಜಧರ್ಮವನ್ನು ಬೋಧಿಸುವ ಅಂಶಗಳು ವಿಶಿಷ್ಟವಾಗಿವೆ. ಬಡತನದಲ್ಲಿ ಆನೆ, ದಾಹದಲ್ಲಿ ತುಪ್ಪ, ರೋಗಿಗೆ ರಂಭೆ, ಸಾವಿನಲ್ಲಿ ರಾಜ್ಯಪಟ್ಟ ಸಿಕ್ಕರೆ ಫಲವೇನು? ಬದಲಾಗಿ ಕಡಲಲ್ಲಿ ಬಿದ್ದವರಿಗೆ ತೆಪ್ಪ, ಕಡುಬಡವನಿಗೆ ಚಿನ್ನ, ರೋಗಿಗೆ ಅಮೃತದ ಅವಶ್ಯಕತೆ ಇದೆ. 'ಬೇಡಿದುದನ್ನು ಕೊಡುವುದು ದೊರೆಯ ದೊಡ್ಡತನ!' ಎಂದು ಬುದ್ಧಿವಾದ ಹೇಳುತ್ತಾರೆ. ಯಾರ ಅವಶ್ಯಕತೆಗೆ ಏನು ಸಲ್ಲಬೇಕೋ ಅದು ಮಾತ್ರ ಸಿಕ್ಕರೆ ಉಪಯೋಗಕ್ಕೆ ಬರುತ್ತದೆ. ಇಲ್ಲವಾದರೆ ಅದು ವ್ಯರ್ಥ ಎಂದು ರಾಜ ನಿರ್ವಹಿಸಬಹುದಾದ ಕಾರ್ಯಗಳನ್ನು ಚೊಕ್ಕವಾಗಿ ತಿಳಿಹೇಳುತ್ತಾರೆ.

ಹಾಡನು ಆಲಿಸಿದ ಕಿವಿಗೆ ಹೊಲೆಯಿಲ್ಲ, ಮಾತಾಡಿ ಹೊಗಳಿದ ಬಾಯಿಗೆ ಹೊಲೆಯಿಲ್ಲ, ರೂಪು ಯೌವನ ನೋಡಿದ ಕಣ್ಣಿಗೆ ಹೊಲೆಯಿಲ್ಲ, ಮೈಮುಡಿಯ ಸುಗಂಧ ಮೂಸಿದ ಮೂಗಿಗೆ ಹೊಲೆಯಿಲ್ಲ. ಬದಲಾಗಿ ಸ್ಪರ್ಶಿಸುವ ಚರ್ಮಕ್ಕೆ ಹೊಲೆಯಾಗಿ ಪಂಚೇಂದ್ರಿಯಗಳಲ್ಲಿ ನಾಲ್ಕಧಮವಾಗಿ ಒಂದಧಿಕವಾಯಿತೆ? ಎಂಬ ಮಾರ್ಮಿಕ ಪ್ರಶ್ನೆ ಹೊಲೆತನವನ್ನು ಅವಹೇಳನ ಮಾಡಿದ ಹರಿಶ್ಚಂದ್ರನಿಗೆ ಕೇಳುತ್ತಾರೆ. ಇದು ಬರೀ ಹರಿಶ್ಚಂದ್ರನಿಗೆ ಕೇಳಿದ ಪ್ರಶ್ನೆಯಂತಿರದೆ, ಕೇವಲ ಸೇವಾ ವಲಯಕ್ಕೆ ಮಾತ್ರ ತಳವರ್ಗದವರನ್ನು ಬಳಸಿಕೊಳ್ಳುವ ಯಾಜಮಾನ್ಯಕ್ಕೆ, ಪ್ರಭುತ್ವಕ್ಕೆ ಕೇಳಿದ ಪ್ರಶ್ನೆಯಾಗಿದೆ. ತಳವರ್ಗಗಳ ಸೇವೆಯನ್ನು ಕನಿಷ್ಠಮಟ್ಟದಿಂದ ಕಾಣುವ ಅಧಿಕಾರಶಾಹಿತ್ವಕ್ಕೆ ತನ್ನ ಸಮುದಾಯದ ಧ್ವನಿಯಾಗಿ ನಿಂತು ಕೇಳುವಂತೆ ಈ ಮಾತು ರೂಪುಗೊಂಡು ನಿಂತಿದೆ. ಮುಂದುವರೆದು 'ಒಲಿದು ಬಂದವರನ್ನು ಉಪಚರಿಸುವುದು ನಿನ್ನ ಧರ್ಮವಲ್ಲವೆ?' ಎಂದು ಪ್ರಶ್ನಿಸುತ್ತಾರೆ. ಪಂಚೇಂದ್ರಿಯಗಳಲ್ಲಿ ನಾಲ್ಕು ಅಧಮ ಒಂದು ಶ್ರೇಷ್ಠವೇ? ಎಂದೆನ್ನುತ್ತಾ ಈ ತಾರತಮ್ಯವೇಕೆಂದು ಪ್ರಶ್ನಿಸುತ್ತಾರೆ. ಅಧಿಕಾರಶಾಹಿಗಳು ಉಪಭೋಗದಲ್ಲಿರುವಾಗ ಕಲ್ಪಿಸುವ ಸ್ಥಾನ, ಉಪಚರಿಸುವಾಗ ಇಲ್ಲದಿರುವಿಕೆಯನ್ನು ಇಲ್ಲಿ ಕಾಣಬಹುದು. ದುಡಿತಕ್ಕೆ, ಕೆಲಸಕ್ಕೆ ಬೇಕಾದ ಹೊಲೆಯರು ಮನೆ, ಮನಸ್ಸು, ಸಮಾಜದೊಳಕ್ಕೆ ಬರುವಾಗ ಸಮಸ್ಯೆಯಾಗುವ ಮನಸ್ಥಿತಿ

ಅಮಾನವೀಯವಾಗಿದೆ.

ಪ್ರಶ್ನಿಸುವವರನ್ನು ಶಿಕ್ಷಿಸುವ ಅಥವಾ ಇಲ್ಲವಾಗಿಸಿಬಿಡುವ ಅಧಿಕಾರಶಾಹಿ ಧೋರಣೆಯು, ಎಂದಿಗೂ ಪ್ರಶ್ನಿಸುವುದನ್ನು ಸಹಿಸಿಕೊಳ್ಳುವುದಿಲ್ಲ. ಹೊಲತಿಯರ ಪ್ರಶ್ನಿಸುವ ತಾರ್ಕಿಕತೆ ಹಾಗೂ ಧೈರ್ಯ ಎರಡೂ ಕೂಡ ರಾಜನನ್ನು ಕಟ್ಟಿ ಹಾಕುತ್ತದೆ. ಹೊಲತಿಯರು ಪ್ರತಿಪಾದಿಸುವ ಧರ್ಮವು ಕುಲಮೂಲವಾಗಿರದೆ, ಗುಣ ಮೌಲ್ಯಾಧಾರಿತ ಮಾನವೀಯ ಪ್ರತಿಸ್ಪಂದನೆಯಾಗಿದೆ. ಪ್ರಭುತ್ವವನ್ನು ಸಾತ್ವಿಕವಾಗಿ, ತಾರ್ಕಿಕವಾಗಿ ಎದುರುಗೊಂಡ ಹೊಲತಿಯರಿಗೆ ಸಿಕ್ಕುವುದು ಶಿಕ್ಷೆಯೇ ಆಗಿದೆ. ಹರಿಶ್ಚಂದ್ರನು ಮಂತ್ರಿಯೊಡಗೂಡಿ ಹೊಲತಿಯರನ್ನು "ಒಬ್ಬೊಬ್ಬರನ್ನೂ, ಮೂಳೆ ಬೆನ್ನು ಒಡೆಯುವ ಹಾಗೆ, ತುರುಬು ಹುಡಿಯಲ್ಲಿ ಹೊರಳುವ ಹಾಗೆ, ಹಲ್ಲು ಉದುರಿಹೋಗುವ ಹಾಗೆ, ಬಾಯಿ ಒಡೆಯುವಂತೆ, ಮೆಯ್ ನೋಯುವಂತೆ, ಕಯ್ ಉಳುಕುವಂತೆ, (ಅವರು) ಹೋದಲ್ಲಿ ಹೋಗಿ, ಹೊಕ್ಕದಲ್ಲಿ ಹೊಕ್ಕಿ, ಬೆನ್ನಟ್ಟಿ ರಕ್ತ ಸುರಿಯುವ ಹಾಗೆ ಹೊಡೆದು ಪೊಗರು ಕುಗ್ಗುವಂತೆ ಹೊಡೆದ."[1] ಇಂತಹ ದೌರ್ಜನ್ಯ ಹಾಗೂ ಹಿಂಸಾತ್ಮಕ ಕೃತ್ಯಗಳು ಪರಂಪರೆಯುದ್ದಕ್ಕೂ ತಳವರ್ಗಗಳ ಮೇಲೆ ನಡೆಯುತ್ತಲೆ ಬಂದಿವೆ.

ಕವಿ ರಾಘವಾಂಕನಲ್ಲಿ ಸತ್ಯನಿಷ್ಠ ಪರಿಪಾಲಕನಾದ ಹರಿಶ್ಚಂದ್ರನ ಪಾತ್ರಚಿತ್ರಣವು ಈ ಹಿಂದೆ ವೇದ, ಪುರಾಣ, ದೇವಿಭಾಗವತಗಳಲ್ಲಿಯೂ ಅಭಿವ್ಯಕ್ತವಾಗಿದೆ. ವೇದದ ಕಥೆಗಳಲ್ಲಿ ಅಸತ್ಯನು, ಮಾತಿಗೆ ತಪ್ಪಿದವನಾಗಿ ಚಿತ್ರಿತವಾದ ಹರಿಶ್ಚಂದ್ರನು, ವಚನೋತ್ತರದ ಕಾಲಘಟ್ಟದಲ್ಲಿ ಸತ್ಯನಿಷ್ಠನಾಗಿ ಚಿತ್ರಿತನಾಗಿದ್ದಾನೆ. ಹೆಸರಿಗೆ ಸತ್ಯ ಎಂಬ ವಿಶೇಷಣವನ್ನೂ ಆದಿಯಲ್ಲಿರುವಂತೆ ಚಿತ್ರಿತವಾಗಿದ್ದಾನೆ. ಸತ್ಯನಿಷ್ಠನೇನೋ ಹೌದು. ಆದರೆ ತನಗಿರುವ ಕುಲಮದದ ಅಹಂಕಾರವನ್ನು ಬಿಡದವನಾಗಿದ್ದಾನೆ. ಇಡೀಯಾಗಿ ಹರಿಶ್ಚಂದ್ರ ಕಾವ್ಯ ಅವನನ್ನು ಸತ್ಯನಿಷ್ಠನನ್ನಾಗಿ ಚಿತ್ರಿಸಿದಂತೆಯೇ ಅವನೊಳಗಿರುವ ಕುಲಮದದ ಕಾರಣದಿಂದಾಗಿ ಆತ ಅನುಭವಿಸಬೇಕಾದ ಪರಿಸ್ಥಿತಿಗಳನ್ನೂ ಅಷ್ಟೇ ಚಿತ್ರಕವಾಗಿ ಅಭಿವ್ಯಕ್ತವಾಗಿದೆ.

ಹೊಲತಿಯರು ಹರಿಶ್ಚಂದ್ರನಲ್ಲಿ ಸತ್ತಿಗೆಯನ್ನು ಕೇಳಿದಾಗ ಅವನು ನೀಡುವುದಿಲ್ಲ. ಬದಲಾಗಿ 'ನಿಮಗೆ ಕೊಟ್ಟರೆ ಉಪಕಾರವಾಗುತ್ತದೆ, ಆದರೆ ವಿಶ್ವಾಮಿತ್ರರಿಗೆ ಕೊಟ್ಟರೆ ಆರಾಧನೆಯಾಗುತ್ತದೆ' ಎನ್ನುತ್ತಾನೆ. 'ಸಂತೋಷದಿಂದ ಕೊಡುವ ತ್ಯಾಗಬುದ್ಧಿಯೇ ಬೇರೆ; ಪಾತ್ರವನ್ನರಿತು ಕೊಡುವ ದಾನಗುಣವೇ ಬೇರೆ' ಎಂದು ಸಮರ್ಥಿಸಿಕೊಳ್ಳುವ ಹರಿಶ್ಚಂದ್ರನ ಮಾತಿನಲ್ಲಿ ತ್ಯಾಗ ಹಾಗೂ ದಾನ ಎಂಬೆರಡು ಅಂಶಗಳಿವೆ. ಇವೆರಡೂ ವಾಚ್ಯಾರ್ಥದಲ್ಲಿ ಒಂದೇ ಎಂದು ತೋರುತ್ತಿದ್ದರೂ ಇವುಗಳಲ್ಲಿನ ಲಕ್ಷಣಾರ್ಥವೂ ಬೇರೆ ಬೇರೆಯಾಗಿದೆ. ಕನಿಷ್ಠರಿಗೆ ಕೊಡುವಾಗ ಅದು

ತ್ಯಾಗದ ಆಯಾಮವನ್ನು, ಉತ್ತಮರಿಗೆ ಶ್ರೇಷ್ಠರಿಗೆ ಕೊಡುವಾಗ ದಾನವಾಗಿಯೂ ಅರ್ಥ ಪಡೆದುಕೊಂಡಿದೆ. ಅದನ್ನೇ ಹರಿಶ್ಚಂದ್ರ ಇಲ್ಲಿ ವಿಶ್ವಾಮಿತ್ರರಿಗೆ ಕೊಟ್ಟರೆ ಆರಾಧನೆಯಾಗುತ್ತದೆ ಎಂಬ ಸಾರ್ಥಕ ಭಾವದಲ್ಲಿ ವ್ಯಕ್ತಪಡಿಸುತ್ತಾನೆ. ಸತ್ತಿಗೆಯನ್ನು ಕನಿಷ್ಠರಿಗೆ ನೀಡಿದರೆ ಕೇವಲ ಅವರು ಮಾತ್ರ ಅನುಭವಿಸುತ್ತಾರೆ. ಆದರೆ ಮಹಾತ್ಮರಿಗೆ ನೀಡಿದರೆ ಪರ್ಯಾಯವಾಗಿ ದುಪ್ಪಟ್ಟು ಫಲಾಪೇಕ್ಷೆಯಿಂದ ಮರಳಿ ಬರುತ್ತದೆ ಎಂಬ ನಿರೀಕ್ಷಣ ಮನೋಭಾವಿಕೆ ಇಲ್ಲಿದೆ. ಕೊಡುವ ಮನಸ್ಸಿಲ್ಲದ ಕಾರಣ ಹೀಗೆ ತ್ಯಾಗಬುದ್ಧಿ ಹಾಗೂ ದಾನಗುಣ ಎಂಬ ಅಡತಡೆಯನ್ನು ಮುಂದು ಮಾಡುತ್ತಾನೆ. .

ವಸುಧೆ ಹುಟ್ಟಿದಾಗಲೆ ಸೂರ್ಯವಂಶದಲ್ಲಿ ಹುಟ್ಟಿದ ತಮಗೆ ಹೆಣ್ಣು ಕೊಡಲು ಇದುವರೆಗೆ ಯಾರೂ ಹುಟ್ಟಿಲ್ಲ. ಈ ಹೊಲತಿಯರು ಬಂದು ಸತಿಯರಾಗುತ್ತೇವೆ ಎನ್ನುತ್ತಾರಲ್ಲ ಇದೇನು ಕಾಲ ಮಹಿಮೆಯೋ ಅಥವಾ ನೆಲದ ಮಹಿಮೆಯೋ ಎಂದು ಹರಿಶ್ಚಂದ್ರ ಕುಲಮದದಲ್ಲಿ ಅಣಕಿಸುತ್ತಾನೆ. ಸೂರ್ಯವಂಶದಲ್ಲಿ ಹುಟ್ಟಿದವರಿಗೂ ಮುಂದೆ ಸಾವು ತಪ್ಪದ ಮೇಲೆ ಹರಿಶ್ಚಂದ್ರನ ಕುಲದ ಪ್ರಶ್ನೆ ಸಣ್ಣತನವೆನಿಸುತ್ತದೆ. ಇದೇ ಹರಿಶ್ಚಂದ್ರನಿಗೆ ತನ್ನದೇ ರಾಜ್ಯ ಕಳೆದರೂ, ಸತಿ–ಸುತನನ್ನು ಅಡಮಾನವಾಗಿಟ್ಟರೂ, ಸಂಬಳಿಗೋಲು ಹಿಡಿದು ಸ್ಮಶಾಣವಾಸಿಯಾದರೂ ತನಗಿರುವ ಕುಲಮದ ಮಾತ್ರ ಇಳಿಯುವುದಿಲ್ಲ. 'ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ' ಎಂಬ ಕವಿವಾಣಿ 'ಕುಲದ ಮದಮಂ ಪುರುಷರೂಪಿಂದೆ ಪೋಗುತಿದೆ' ಎಂದು ಹೇಳುವಷ್ಟರ ಮಟ್ಟಿಗೆ ಹರಿಶ್ಚಂದ್ರನಲ್ಲಿ ಕುಲದ ಬಗೆಗಿನ ಅಹಂಕಾರವಡಗಿತ್ತು ಎನ್ನಬಹುದು.

ಹೊಲೆತನ ತನ್ನ ಗುಣದಿಂದ ಶ್ರೇಷ್ಠತೆಯನ್ನು ಪಡೆಯಲಾಗದು ಎಂಬ ವಾದವನ್ನು ಕೆಲವು ಮಾತುಗಳಲ್ಲಿ ಹರಿಶ್ಚಂದ್ರ ಆಡುತ್ತಾನೆ. ಬಚ್ಚಲ ನೀರು ತಿಳಿಯಾದರೆ ಸ್ನಾನಕ್ಕೆ ತಕ್ಕುದೆ?, ನಾಯಿಯ ಮೊಲೆವಾಲು ಕುಡಿಯಲು ತಕ್ಕುದೆ? ಮಸಣದಲ್ಲಿ ಬೆಳೆದ ಹೂ ಮುಡಿಯಲು ಯೋಗ್ಯವೆ? ಹೊಲತಿಯರಾದ ನಿಮ್ಮಲ್ಲಿ ಯೌವನ, ರೂಪು, ಜಾಣತನದಿಂದ ಸ್ಪೃಷ್ಯರಾಗಲು ಸಾಧ್ಯವಿಲ್ಲ ಎಂಬ ಅಸ್ಪೃಷ್ಯತಾ ವ್ಯಸನಿಯಾಗಿ ಹರಿಶ್ಚಂದ್ರ ತರ್ಕ ಹೂಡುತ್ತಾನೆ. ಎಲ್ಲವನ್ನೂ ಉಪಭೋಗದ ಹಿನ್ನೆಲೆಯ ಮನಸ್ಥಿತಿಯಂದ ನೋಡುವ ಇಲ್ಲಿನ ತರ್ಕವು ಸ್ವಾರ್ಥದ ನೆಲೆಯಿಂದ ಕೂಡಿದೆ. ತನಗೆ ಉಪಯುಕ್ತವಲ್ಲದನ್ನು ಅಯೋಗ್ಯ/ಅನುಪಯೋಗಿ ಎಂದು ತೀರ್ಮಾನಿಸುವುದು ದಡ್ಡತನವಾಗಿದೆ. ಬಚ್ಚಲುದಕವು ಹಿತ್ತಲಿನ ಗಿಡಗಂಟಿ–ಜೀವರಾಶಿಗೆ, ನಾಯಿಯ ಮೊಲೆವಾಲು ಅದರ ಮರಿಗಳಿಗೆ, ಮಸಣದ ಹೂಗಳು ದುಂಬಿಗಳಿಗೆ ಯೋಗ್ಯವೇ ಆಗಿದೆ. ಯಾವ ರಾಜಧರ್ಮವು ಸರ್ವಪ್ರಜೆಗಳನ್ನು ಸಮಾನವಾಗಿ ಕಾಣಬೇಕಾಗಿರುವುದೊ ಅದು ಇಲ್ಲಿ ತಾರತಮ್ಯದ ಮನಸ್ಥಿತಿಯಲ್ಲಿದೆ. ಇದಕ್ಕೆ ಪ್ರತಿಯಾಗಿ ಹೊಲತಿಯರು 'ಪಂಚೇಂದ್ರಿಯಗಳಲ್ಲಿ ನಾಲ್ಕಧಮ ಒಂದಧಿಕವೇ?'

ಎಂಬ ನ್ಯಾಯತರ್ಕವನ್ನು ಧೈರ್ಯದಿಂದ ಕೇಳುತ್ತಾರೆ.

'ನಿಮಗಾಗಿ ನನ್ನ ಕುಲವನ್ನು ಕಡೆಸಿಕೊಳ್ಳಬೇಕೆ?' ಎಂದು ಹೊಲತಿಯರನ್ನು ಹರಿಶ್ಚಂದ್ರ ಕುಲವನ್ನು ಮುಂದುಮಾಡಿ ಪ್ರಶ್ನಿಸುತ್ತಾನೆ. ಆದರೆ ಮುಂದೆ ವೀರಭಾಹುವಿನೊಟ್ಟಿಗೆ ಸಂಬಳಿಗೋಲು ಹಿಡಿದು ಮಸಣವಾಸಿಯಾದಾಗ ಕುಲ ಕೆಡೆಲಿಲ್ಲವೆ? ಸೂರ್ಯವಂಶ ನಾಶವಾಯಿತೆ? ಎಂದರೆ ಅಲ್ಲಿಯೂ ತನ್ನ ಹಠವನ್ನು ಬಿಡದಂತೆ 'ಘನಸತ್ಯವೇ ಜೀವವೆಂದಿರ್ದ ಹೊಲೆಯನ ಸೇವೆ ಗುರುಸೇವೆ ಹೊತ್ತ ಹೊಲೆವೇಷ ಪಾವನ ಪುಣ್ಯವೇಷ' ಎಂದೆನ್ನುತ್ತಾನೆ. ಹರಿಶ್ಚಂದ್ರನ ಘನಸತ್ಯ ಕುಲದಲ್ಲಿದೆಯೋ ಅಥವಾ ನಡೆಯಲ್ಲಿದೆಯೋ ಎಂಬುದನ್ನು ಅರ್ಥಮಾಡಿಕೊಂಡರೆ 'ಗುರುಸೇವೆ' ಹಾಗೂ 'ಪುಣ್ಯವೇಷ'ದ ಪರಕಾಯ ಪ್ರವೇಶವು ಅರ್ಥವಾಗುತ್ತದೆ.

ಪಾಪವನ್ನು ತೊಳೆಯುವ ಗಂಗೆಗೆ ಪಾಪದ ಲೇಪನವುಂಟೆ? ಹಾಗೆಯೆ ತಮ್ಮನ್ನು ವರಿಸಿ ಉದ್ಧರಿಸು ಎಂಬ ಬೇಡಿಕೆಯನ್ನು ಹೊಲತಿಯರು ಮುಂದಿಡುತ್ತಾರೆ. ಹರಿಶ್ಚಂದ್ರ ಇದಕ್ಕೆ ಪರ್ಯಾಯವಾಗಿ 'ಒಂದು ಕೊಡ ಹಾಲನ್ನು ಕೆಡಿಸಲು ಎಷ್ಟು ಹುಳಿ ಬೇಕು?' ಎನ್ನುತ್ತಾನೆ. ಇಲ್ಲಿನ ಎರಡು ವಿಚಾರಗಳಲ್ಲಿ ಮೊದಲನೆಯದ್ದು ವಿಶಾಲಾರ್ಥದ ಆಶಯದಲ್ಲಿದ್ದು ಸೇರಿ ಸಾಗುವ, ಸಮತೆಯ ನಡೆಯನ್ನು, ವಿಕಸನದ ಸಕಾರಾತ್ಮಕ ಹಾದಿಯನ್ನು ತೆರೆದಿಡುತ್ತದೆ. ಎರಡನೆಯದ್ದು ಇರುವ ಅಪಾರ ಅಮೃತವನ್ನೂ ಕೆಡುಕು ಕಣ್ಣಲ್ಲಿ ನೋಡುವ ಸಂಕುಚಿತ ಹಾಗೂ ನಕಾರಾತ್ಮಕ ಯೋಚನೆಯನ್ನು ಅರ್ಥೈಸುತ್ತದೆ. ಕೂಡಿಬಾಳುವ ಸಹಬಾಳ್ವೆಯ ತತ್ವವನ್ನು ಹೊಲತಿಯರು ಪ್ರತಿಪಾದಿಸಿದರೆ, ತನ್ನನ್ನು ನಾಶಗೊಳಿಸಿಕೊಳ್ಳಬೇಕೆ ಎಂಬ ಭ್ರಮಾತ್ಮಕ ಕುಲನಿಷ್ಠೆಯ ಮಾದರಿಯನ್ನು ಮುಂದಿಡುತ್ತಾನೆ. ಸತ್ಯವ್ರತ ಪರಿಪಾಲಕನಾಗಿರುವಂತೆ ಹೊಲತಿಯರ ಬೇಡಿಕೆಯನ್ನು ಅಹಿಂಸಾತ್ಮಕವಾಗಿ ನಿರಾರಿಸಬಹುದಿತ್ತು. ಮೇಲೆ ಹೇಳಿದಂತೆ ಹೊಲತಿಯರನ್ನು ಬೆನ್ನುಮೂಳೆ ಮುರಿವಂತೆ, ರಕ್ತ ಸೋರುವಂತೆ ಬಡಿಯುವ ಮೂಲಕ ಹಿಂಸಾವಾದಿಯಾಗಿ ಕಂಡುಬರುತ್ತಾನೆ. ಇಲ್ಲಿನ ಹರಿಶ್ಚಂದ್ರ ಕೇವಲ ಕುಲ ಪಾರಂಪರ್ಯದ ಕುರುಡು ಅನುಯಾಯಿ. ಈ ಕುರುಡುತನಕ್ಕೆ ಕಾರಣ ಆತನ ಕುಲಮದವಾಗಿದೆ.

ರಾಜಧರ್ಮವೂ–ಸತ್ಯನಿಷ್ಠತೆಯೂ ಎರಡೂ ಭಿನ್ನ ಪಾತಳಿಗಳು. ಇವೆರಡನ್ನು ಸಂಕರವಾಗಿಸಿ ಕಾವ್ಯ ಕಟ್ಟುವ ಕಲೆ ರಾಘವಾಂಕನ ಪ್ರತಿಭೆಯಲ್ಲಿದೆ. ಪ್ರಭುತ್ವವೆಂದಮೇಲೆ ಅಲ್ಲಿ ರಾಜಕಾರಣವಿರುತ್ತದೆ. ಅದು ಕೇವಲ ರಾಜ್ಯದ ಗದ್ದುಗೆಯ ಉಳಿವಿಗಾಗಿ ನಡೆಯುವ ಹೋರಾಟ. ಉಳಿದುವೆಲ್ಲವೂ ಅಲ್ಲಿ ನಗಣ್ಯ. "ಮನುಷ್ಯನ ವಿಕಾಸದ ಘಟ್ಟದಲ್ಲಿ ಕಲಾಮಾಧ್ಯಮವು ನೀತಿಶಾಸ್ತ್ರ ಮತ್ತು ಧರ್ಮಶಾಸ್ತ್ರಗಳಿಗೆ 'ಕಾಂತಾಸಂಮಿತ' ಮಾರ್ಗದಲ್ಲಿ ಅಭಿವ್ಯಕ್ತಿಸಲು ಸಿಕ್ಕ ಒಂದು ಉಪಕರಣವಾಗಿ ಬಳಕೆಯಾಗಿದೆ.

ಎಷ್ಟೋಬಾರಿ ಈ ಮತಧರ್ಮ ವಿಚಾರಗಳನ್ನ – ಕಲಾನುಭವವನ್ನಾಗಿ ಮಾಡುವಲ್ಲಿ ಎಷ್ಟೋ ಕವಿಗಳು ಸೋತಿದ್ದಾರೆ ಮತ್ತು ಕೆಲವರು ಮತಧರ್ಮದ ವಿಚಾರ ಹೇಳುತ್ತಲೇ ಕಲಾಪ್ರೌಢಿಮೆಯನ್ನು ಹಾಗೂ – ಬದುಕನ್ನು ಕುರಿತ ಉನ್ನತ ಚಿಂತನೆಯನ್ನು ನಡೆಸಿದ್ದಾರೆ. ''[2]

ವಚನೋತ್ತರದ ಕಾಲಘಟ್ಟದಲ್ಲಿ ಬರೆದ ರಾಘವಾಂಕನಿಗೆ ತನ್ನ ಹಿಂದಿನ ಪರಂಪರೆಯ ಪ್ರಜ್ಞೆ, ವಾಸ್ತವದ ಅರಿವು ಮತ್ತು ತನ್ನ ಕಾಲದ ಸಂವೇದನೆಗಳ ಸೂಕ್ಷ್ಮನೋಟಗಳು ತಿಳಿದಿದ್ದವು. ಈ ಕಾರಣಕ್ಕೆ ಆತ ಹರಿಶ್ಚಂದ್ರಚಾರಿತ್ಯದಂತಹ ಕಾವ್ಯವನ್ನು ಬರೆಯಲು ಸಾಧ್ಯವಾಯಿತು. ಬಹುಶಃ ಈ ಕಾವ್ಯವನ್ನು ಹೊರತುಪಡಿಸಿ ರಾಘವಾಂಕನನ್ನು ಪ್ರಸ್ತುತದಲ್ಲಿ ಸಮಕಾಲೀನಗೊಳಿಸಲು ಕಷ್ಟಸಾಧ್ಯ. ಕಾವ್ಯದ ವಸ್ತು, ಭಾಷೆ, ನಿರೂಪಣೆ, ಪಾತ್ರ ನಿರ್ವಹಣೆ ಹೀಗೆ ಅನೇಕ ಕಾವ್ಯಸಂವಿಧಾನದ ಮಾನದಂಡಗಳಿಂದ ಹೊಗಳಿಸಿಕೊಂಡರೂ, 'ನಡೆವರೆಡಹದೆ ಕುಳಿತರೆಡಹುವರೆ. . ತಪ್ಪಂ ಹಿಡಿದು ಸಾಧಿಸದೆ ಕಡೆತನಕ ಬಂದ ಲೇಸಿಂಗೆ ತಲೆದೂಗೆ ತಲೆಯೊಡೆವುದೇ!.' ಎಂದು ತಿಳಿಹಾಸ್ಯದಲ್ಲಿ ಭಿನ್ನವಿಸಿಕೊಳ್ಳುತ್ತಾನೆ. ''ತನ್ನ ಬರವಣಿಗೆಯ ಉದ್ದೇಶ ನಿರಾಸಕ್ತ, ನಿರುದ್ದೇಶ ಎಂದು ಹೇಳಿಕೊಂಡರೂ ಅವನು ಬಳಸುವ ಭಾಷೆಗೆ, ಶಬ್ದಗಳಿಗೆ ಒಂದು ಅರ್ಥಪರಂಪರೆ, ಒಂದು ಚಾರಿತ್ರಿಕ ಹಿನ್ನೆಲೆ ಸಮಕಾಲೀನ ಸಮಾಜದ ಆಶಯ ಆಸಕ್ತಿಗಳ ಒಡೆತನ ಇದ್ದೇ ಇರುತ್ತದೆ. ಸಾಹಿತ್ಯವೇನು ಸಂಗೀತದ ಹಾಗೆ ನಿರಾವಲಂಬಿಯಲ್ಲ. ನಿರ್ವಾತದಲ್ಲಿ ಸೃಷ್ಟಿಯಾಗುವುದಿಲ್ಲ. ಸಮಕಾಲೀನ ಭಾಷೆಯೊಳಗೆ ಸಮಕಾಲೀನ ಬದುಕು ನೋವು ನಲಿವು ಸಮಕಾಲೀನ ಮತ ಧರ್ಮ ಆಚಾರ ವಿಚಾರಗಳೂ ಅಡಗಿರುತ್ತವೆ. ''[3]

ಹೊಲತಿಯರ ಈ ಪ್ರಸಂಗದ ಕುರಿತು ಹರಿಶ್ಚಂದ್ರ ಕಾವ್ಯ ಸಂಗ್ರಹದ ಪೀಠಿಕೆಯಲ್ಲಿ ''ಇಲ್ಲಿ ಹರಿಶ್ಚಂದ್ರನ ಸೌಮ್ಯಗುಣವನ್ನೂ ಗಾಯಕಿಯರ ವಕ್ರ ಸ್ವಭಾವವನ್ನೂ ಕವಿ ಚೆನ್ನಾಗಿ ಚಿತ್ರಿಸಿದ್ದಾನೆ. ಅವರ ಸಂಭಾಷಣೆಯು ರಸವತ್ತಾಗಿದೆ. ''[4] ಎಂದು ಎ ಆರ್ ಕೃಷ್ಣಶಾಸ್ತ್ರೀ ಅವರು ಅಭಿಪ್ರಾಯಿಸುತ್ತಾರೆ. ಈ ಹೇಳಿಕೆಯಲ್ಲಿ ಹರಿಶ್ಚಂದ್ರನನ್ನು ಸೌಮ್ಯ ಸ್ವಭಾವದವನೆಂದು, ಹೊಲತಿಯರ ವರ್ತನೆ ವಕ್ರ ಸ್ವಭಾವದಲ್ಲಿದೆಯೆಂದು ಕೀಳಾಗಿ ವ್ಯಾಖ್ಯಾನಿಸುತ್ತಾರಲ್ಲದೆ, ಸಂಭಾಷಣೆ ರಸವತ್ತಾಗಿದೆ ಗಮನಿಸಿ ಎಂದು ದಾಟಿಸುತ್ತಾ ವ್ಯಾಖ್ಯಾನವನ್ನು ಒಪ್ಪಿಸುವ ಹೇರಿಕೆಯನ್ನು ಇಲ್ಲಿ ಅಲ್ಲಗಳೆಯಲಾಗದು.

ಕವಿಗೆ ತನ್ನ ಕಾವ್ಯದಲ್ಲಿ ಹೊಲತಿಯರ ಪ್ರಸಂಗವನ್ನು ಎತ್ತಿಕೊಳ್ಳುವ ಅನಿವಾರ್ಯತೆ ಉಂಟಾದ ಹಿನ್ನೆಲೆಯನ್ನು ಗಮನಿಸಬೇಕು. ಶರಣ ಚಳವಳಿ ಎಲ್ಲ ವರ್ಗದವರನ್ನು ಒಳಗುಮಾಡಿಕೊಂಡು ಸಾಗುವ ಮೂಲಕ ಸಮತೆಯ ಆಶಯವನ್ನು

ಸಾರಿತು. ತನ್ನ ನೆಲೆಸಿದ ವರ್ತಮಾನವನ್ನು ಕವಿ ಈ ಮೂಲಕ ಪ್ರಸ್ತುತಗೊಳಿಸುತ್ತಾನೆ. ಹೊಲತಿಯರ ಪ್ರಸಂಗದಲ್ಲಿ ಹೊಲೆತನದ ಚರ್ಚೆಯ ಸಂಭಾಷಣಾ ತರ್ಕವನ್ನು ಗಟ್ಟಿಯಾಗಿ ಮಾಡುತ್ತಾ, ಶ್ರೇಷ್ಠತೆಯ ವ್ಯಸನಕ್ಕೆ ಪೆಟ್ಟುಕೊಟ್ಟು ಕುಲಮದವನ್ನು ತಣಿಸಲು ಮುಂದಾದ ಮಧ್ಯಕಾಲೀನ ಸಂಧರ್ಭದ ಕನ್ನಡದ ಏಕೈಕ ಕೃತಿಯೆಂದರೆ ಅದು ಹರಿಶ್ಚಂದ್ರಚಾರಿತ್ರ. "ತನ್ನ ಕೃತಿಯೊಳಗೆ ಒಂದು ವಾದವನ್ನು ಮಂಡಿಸುವ ಸಾಹಿತಿ – ಅದೇ ಸಂದರ್ಭದಲ್ಲಿ ಪರೋಕ್ಷವಾಗಿ ಇನ್ನೊಂದು ವಾದದ ನಿರಾಕರಣೆಯನ್ನೂ ಮಾಡುತ್ತಿರುತ್ತಾನೆ. ಅಷ್ಟಲ್ಲದೆ ತಾನು ಒಪ್ಪಿ ಬರೆಯುವ ವಾದಗಳನ್ನೂ ಮೀರಿ ಅದರಾಚೆಯ ವಾಸ್ತವವನ್ನೂ ಗ್ರಹಿಸಲು ತವಕಿಸಿರುತ್ತಾನೆ. ಎಷ್ಟೋ ಬಾರಿ ಅವನ ರಚನೆ – ಅವನು ಅಂದುಕೊಂಡಿದ್ದಕ್ಕಿಂತಲೂ ತದ್ವಿರುದ್ಧವಾಗಿ ಅಭಿವ್ಯಕ್ತಿಯನ್ನು ಪಡೆದಿರುವ ಸಾಧ್ಯತೆಯೂ ಇದೆ"[5] ಹಾಗೆಯೆ ಇಲ್ಲಿ ಕೃತಿಯ ಒಟ್ಟು ಆಶಯ 'ಸತ್ಯಂ ಶಿವಂ ಸುಂದರಂ' ಎಂಬ ಎಳೆಯನ್ನಿಟ್ಟುಕೊಂಡು, ಶಿವಭಕ್ತಿಯ ಪಾರಮ್ಯವನ್ನು ಮೆರೆಯುವಲ್ಲಿ ಮುಳುಗಿಯೋಗಿದೆ. ಹರಿಶ್ಚಂದ್ರಚಾರಿತ್ರ್ಯ ಎಲ್ಲ ಕಾಲಕ್ಕೂ ಸಮಕಾಲೀನವಾಗಿ ನಿಲ್ಲಬಲ್ಲ ಕಾವ್ಯವಾಗಿ ರೂಪುಗೊಳ್ಳಲು ಕಾರಣ ಅದು ಎತ್ತಿಕೊಳ್ಳುವ ಕುಲದ ಪ್ರಶ್ನೆಯೊಂದಿಗೆ ಪ್ರತಿಪಾದಿಸುವ ಮಾನವೀಯ ಮೌಲ್ಯವಾಗಿದೆ.

ಮುನಿಶ್ರೇಷ್ಠರೆಂದೆನಿಸಿಕೊಂಡ ವಿಶ್ವಾಮಿತ್ರನ ಅತಿಕೋಪ, ದ್ವೇಷ, ಅನಿಮಿತ್ಯವೈರದ ಹೊಲೆತನ, ವಿಶ್ವಾಮಿತ್ರನ ಕುಲಮದದ ಹೊಲೆತನವನ್ನೂ ಚಿತ್ರಿತಗೊಳಿಸಲು ಕವಿ ಹಿಂಜರಿಯಲಿಲ್ಲ. ಕುಲಶ್ರೇಷ್ಠ ವ್ಯಸನಿಗಳ ಅಧಮತನಗಳನ್ನು ಹೊರಗೆಡವಲು ಕವಿ ಇಂತಹ ಪ್ರಸಂಗಗಳನ್ನು ಬಳಸಿಕೊಂಡಿದ್ದಾನೆ. ಪಾರಂಪರಿಕ ಭ್ರಮಾತ್ಮಕ ನಿಲುವುಗಳ ಎದುರಿಗೆ ಸಮಕಾಲೀನ ಮೌಲ್ಯದ ಜರೂರತ್ತನ್ನು ಚರ್ಚೆಗೆ ಎಡೆಮಾಡಿಕೊಂಡು ಸಮತೆಯ ಹಕ್ಕು ಸಾಧಿಸಿದ್ದಾನೆ.

ಕಾವ್ಯದ ಒಟ್ಟು ಆಶಯ 'ಸತ್ಯಂ ಶಿವಂ ಸುಂದರಂ' ಎಂಬುದಾಗಿದ್ದರೂ ಬಿಡಿಯಾಗಿ ಹೊಲೆತನದ ಚರ್ಚೆಗಳನ್ನು ಪ್ರಾಸಂಗಿಕವಾಗಿ ಮಾಡುತ್ತಾ ತನ್ನ ಕಾಲಮೌಲ್ಯಗಳ ನಿಜವಾದ ಚರಿತ್ರೆಯನ್ನು ಕವಿ ದಾಖಲಿಸಿದ್ದಾನೆ. ಅರವಿಂದ ಮಾಲಗತ್ತಿ ಅವರು ಇಂತಹ ಅನೇಕ ಅಂಶಗಳನ್ನು ಹರಿಶ್ಚಂದ್ರಚಾರಿತ್ಯದ ಕುರಿತು ಅಭಿಪ್ರಾಯಿಸಿದ್ದಾರೆ. ಆದರೆ ಇಲ್ಲಿನ ಪ್ರಯತ್ನವು ಆಂಶಿಕವಾಗಿದ್ದು ಹೊಲತಿಯರ ಪ್ರಸಂಗಕ್ಕೆ ಮಾತ್ರ ಸೀಮಿತಗೊಂಡಿದೆ. ಅಲ್ಲದೆ ಈ ಅಭಿಪ್ರಾಯಗಳು ಇಂದಿಗೆ ಸಮಕಾಲೀನವೆನಿಸುತ್ತವೆ. ಕೃತಿಯ ಒಟ್ಟು ಆಶಯದ ನೆಲೆಯಲ್ಲಿ ಈ ಪ್ರಸಂಗವು ಹರಿಶ್ಚಂದ್ರನ ಸತ್ವ ಪರೀಕ್ಷೆಗೆ ಪೂರಕವಾಗಿದ್ದರೂ ಅದು ಬಿಡಿಯಾಗಿ ಹೊಳೆಯಿಸುವ ಅರ್ಥಮೌಲ್ಯ ಇಂದಿಗೆ ಭಿನ್ನವಾಗಿ ತೋರುತ್ತದೆ. ಇದು ಈ ಕಾಲದ ಭಿನ್ನ ಓದಿನ ಗ್ರಹಿಕೆಯ ಭಾಗವಾಗಿದ್ದು, ಪ್ರಸ್ತುತದಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬಿಕ್ಕಟ್ಟುಗಳನ್ನು ಎದುರಿಟ್ಟು ನೋಡುವಾಗ, ಪರಂಪರೆಯ ಕವಿಗಳು ಇಂತಹ ಬಿಕ್ಕಟ್ಟುಗಳನ್ನು

ನಿರೂಪಿಸಿದ, ನಿರ್ವಹಿಸಿದ ಕ್ರಮಗಳನ್ನು ಅಭ್ಯಸಿಸುವ ತುರ್ತು ಸಹ ಆಗಿರುವುದನ್ನು ಅಲ್ಲಗಳೆಯಲಾಗದು.

**ಕೊನೆ ಟಿಪ್ಪಣಿಗಳು:**


1. ಭಟ್ ಜಿ. ಎಸ್. , (2018), ರಾಘವಾಂಕನ ಹರಿಶ್ಚಂದ್ರಕಾವ್ಯ ಪ್ರವೇಶ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು. ಸಂ. 54
2. ಪ್ರಹ್ಲಾದ ಅಗಸನಕಟ್ಟೆ, (2004), ದಲಿತ–ಬಂಡಾಯ ಕಾವ್ಯ ವಿಚಾರವಾದಗಳು, ಹರ್ಷ ಪ್ರಕಾಶನ, ಹುಬ್ಬಳ್ಳಿ, ಪು. ಸಂ. 14
3. ಅದೇ, ಪು. ಸಂ. 16
4. ವೆಂಕಣ್ಣಯ್ಯ ಟಿ. ಎಸ್. & ಕೃಷ್ಣಶಾಸ್ತ್ರೀ ಎ. ಆರ್. , (2017), ಹರಿಶ್ಚಂದ್ರ ಕಾವ್ಯ ಸಂಗ್ರಹ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. ಸಂ. XXXI
5. ಪ್ರಹ್ಲಾದ ಅಗಸನಕಟ್ಟೆ, (2004), ದಲಿತ–ಬಂಡಾಯ ಕಾವ್ಯ ವಿಚಾರವಾದಗಳು, ಹರ್ಷ ಪ್ರಕಾಶನ, ಹುಬ್ಬಳ್ಳಿ, ಪು. ಸಂ. 17

## ಪರಾಮರ್ಶನ ಗ್ರಂಥಗಳು:

1. ಅರವಿಂದ ಮಾಲಗತ್ತಿ & ಚಂದ್ರಕಿರಣ ಎಸ್. ಕುಳವಾಡಿ, (2014), ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ: ಸಂ–4 (ಪ್ರಾಚೀನ ಸಾಹಿತ್ಯ), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಪ್ರಹ್ಲಾದ ಅಗಸನಕಟ್ಟೆ, (2004), ದಲಿತ–ಬಂಡಾಯ ಕಾವ್ಯ ವಿಚಾರವಾದಗಳು, ಹರ್ಷ ಪ್ರಕಾಶನ, ಹುಬ್ಬಳ್ಳಿ.
3. ಭಟ್ ಜಿ. ಎಸ್. , (2018), ರಾಘವಾಂಕನ ಹರಿಶ್ಚಂದ್ರಕಾವ್ಯ ಪ್ರವೇಶ, ಅಕ್ಷರ ಪ್ರಕಾಶನ, ಹೆಗ್ಗೋಡು.
4. ರಂಗನಾಥಶರ್ಮ ಎನ್, (2018), ರಾಘವಾಂಕನ ಹರಿಶ್ಚಂದ್ರ ಚರಿತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ರಂಗಣ್ಣ ಎಸ್. ವಿ. , (2022), ಶೈಲಿ–1, ಹೇಮಂತ ಸಾಹಿತ್ಯ, ಬೆಂಗಳೂರು.
6. ರಂಗಣ್ಣ ಎಸ್. ವಿ. , (2022), ಶೈಲಿ–2, ಹೇಮಂತ ಸಾಹಿತ್ಯ, ಬೆಂಗಳೂರು.
7. ರಂಗಣ್ಣ ಎಸ್. ವಿ. , (2022), ಶೈಲಿ–3, ಹೇಮಂತ ಸಾಹಿತ್ಯ, ಬೆಂಗಳೂರು.
8. ರವೀಂದ್ರನಾಥ ಕೆ. (2023), ವಿಜಯನಗರ ಸಾಹಿತ್ಯ–ಸಂಸ್ಕೃತಿ, ದಾಸೋಹಿ ಪ್ರಕಾಶನ, ಕಾನಾಮಡುಗು.
9. ವೆಂಕಣ್ಣಯ್ಯ ಟಿ. ಎಸ್. & ಕೃಷ್ಣಶಾಸ್ತ್ರೀ ಎ. ಆರ್. , (2017), ಹರಿಶ್ಚಂದ್ರ ಕಾವ್ಯ ಸಂಗ್ರಹ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.